

## ಕಳೆದ ಸಂಚಿಕೆಯಲ್ಲಿ

ದೇವಣ್ಣನ ಚಹಾದಂಗಡಿಗೆ ಮುತ್ತಣ್ಣ ಬಂದು ಬಾಯಿಗೆ ಬಂದಂತೆ ಒದರಾಡ್ತಾನೆ. ಮಾಯಕ್ಕನ ತವರುಮನೆಗೆ ಕಳಿಸು, ಇಲ್ಲಾಂದ್ರೆ ಚಾದಂಗಡಿ ಸುಟ್ಟುಬಿಡ್ತೀನಿ, ಬಾಟಲಿಯೊಳಗೆ ಪೆಟ್ರೋಲ್ ತುಂಬಿಕೊಂಡೇ ಬಂದೇನಿ ಎಂದು ಹೇಳುತ್ತಾನೆ. ಆಗ ಮಾಯಕ್ಕ ಮಾಯಕ್ಕ ಅಡುಗೆ ಮನೆಯಿಂದ ಉರಿಯುವ ಕೊಳ್ಳಿ ಹಿಡಿದು ಬರುಗಾಳಿಯಂತೆ ಬಂದು 'ನೀ ಯಾರೋ ನನ್ನ ಕರ್ಕೊಂಡು ಹೋಗಾಕ ಬಂದಾವ, ಮೂಳಾ, ಹಳೆ ಮೂಳಾ. ನೀ ಕಟ್ಟಿದ ತಾಳಿ ಆಗ ನಿನ್ನ ಕಣ್ಣ ಇದಿರಿಗೆ ಒಗದ ಬಂದೇನಿಲ್ಲೋ? ನಮ್ಮಿಬ್ಬರ ಮದುವಿ ಮುಗೀತಂತ ಎಲ್ಲರೆದುರಿಗೆ ಸಹಿ ಮಾಡಿದ್ದು ಮರೆತಹೋಗೇತೇನು? ಹೊಳ್ಳೊಳ್ಳೆ ನನ್ನ ಮುಂದ ಬರಾಕ ನಾಚ್ಕಿ ಆಗಂಗಿಲ್ಲ? ಇಂವೆಂತ ಗಂಡ ನೋಡು? ತನ್ನ ಹೆಂಡತಿನ ಮತ್ತೊಬ್ಬನ ಜೋಡಿ ಕಳಿಸಲಿಕ್ಕೆ ಹತ್ಯಾನ' ಎಂದು ಕೆರಳಿ ಚಾಮುಂಡಿಯಂತಾಗುತ್ತಾಳೆ. ದೇವಣ್ಣನ ಜೊತೆಗೂ ಜಗಳವಾಗಿ ಮಾಯಕ್ಕ ಮನೆಬಿಟ್ಟು ಹೊರಡುತ್ತಾಳೆ.

ತುಂಬ ಹೆದರಿಕೆಯಾಯಿತು. ಸಿದ್ದುನ ಗುಂಗುರಗೂದಲಲ್ಲಿ ಕೈಯಾಡಿಸಿದಳು. ಅವನಿಗೆ ಇರಿಸುಮುರಿಸಾಯಿತು. ಮತ್ತಷ್ಟು ಸೂಸಲಾ ಸುರುವಿದಳು. ಕುಡಿಯಲು ನೀರು ತಂದು ಕೊಟ್ಟಳು. ಅವನು ಕೆಮ್ಮಿದಾಗ ತಾನೆ ಕೈಯಾರೆ 'ಸಾವಕಾಶ ತಿನ್ನೊ ಸಿದ್ದು. ಗಂಟಲದಾಗ ಸಿಕ್ಕೀತು. ಗಬಗಬಾ ನುಂಗಬ್ಯಾಡ. ಎಲ್ಲಿ? ಸ್ವಲ್ಪ ಮ್ಯಾಲ ನೋಡು.' ವಾತ್ಸಲ್ಯದಿಂದ ನೀರಿನ ಲೋಟವನ್ನು ಅವನ ತುಟಿಗೆ ಹಿಡಿದಳು.

ಒಂದೆರಡು ಸಲದಲ್ಲಿಯೇ ಅವಳು ತನ್ನ ಸ್ವಂತ ಅತ್ತಿಗೆಯಂತೆ ವರ್ತಿಸುತ್ತಿದ್ದಾಳೆ. ತಾನು ಎರಡುಮೂರು ಸಲ ಬಂದಾಗಿನಿಂದ ತನಗೆ ಮುದ್ದು ಮಾಡುತ್ತಿದ್ದಾಳೆ. ಅವ್ವನಂತೆ ಉಣಿಸಲು ಬರುತ್ತಾಳೆ. ತಾನು ಅವಳ ಮಗನಿದ್ದಂತೆ ಎನ್ನುತ್ತಾಳೆ. ಮಗು ಬೇಕೆಂಬ ಅವಳ ಆಸೆ ಆಸೆಯಾಗಿಯೇ ಉಳಿದಿದೆಯಂತೆ. ಮಕ್ಕಳ ಲಾಲನೆ ಪಾಲನೆಯೆಂದರೆ ಅವಳಿಗೆ ಬಹಳ ಇಷ್ಟವಂತೆ. ಮಾಯಕ್ಕನನ್ನು ಕಂಡಾಗಲೆಲ್ಲ ಸಿದ್ದೂಗೆ ಕೋಪದ ಬದಲು ವಾತ್ಸಲ್ಯವೇ ಉಕ್ಕಿಬರುವುದು. ಅವಳು ಕೆಟ್ಟವಳಲ್ಲ. ತನ್ನ ಬಗ್ಗೆ, ಎಲ್ಲ ಗಿರಾಕಿಗಳ ಬಗ್ಗೆ ಎಷ್ಟೊಂದು ಕಾಳಜಿ ಮಾಡುತ್ತಾಳೆ. ಆಕೆ ಬಂದಿದ್ದರಿಂದಲೆ ಶಿವಣ್ಣ ಸುಧಾರಿಸಿದ. ಇಲ್ಲದಿದ್ದರೆ ಆತ ಹೊಲದ ಕಾಳುಕಡಿ ಕದ್ದು, ಅದನ್ನು ಸೋವಿ ದರದಲ್ಲಿ ಮಾರಿ, ದುಡ್ಡನ್ನು ಗೆಳೆಯರಿಗೆ ಖರ್ಚು ಮಾಡುತ್ತಿದ್ದ. ಅವ್ವ ನೋಡಿದರೆ ಚೀರುತ್ತಿರುತ್ತಾಳೆ.

'ಆ ರಾಕ್ಷಸಿ ಹಂತೇಲಿ ಹೋಗಬ್ಯಾಡ.' ಅವ್ವನನ್ನು ಆಗಿಂದಾಗ ಸಮಾಧಾನ ಮಾಡುವವಳೆ ಸಾವಂತ್ರವ್ವ. 'ಅತ್ತೆವ್ವ, ಆಕಿ ಹಂಗೇನಿಲ್ಲ ಬಿಡು. ಯಾಕ ಸುಮ್ಮನ ನೀ ತಲಿಯೊಳಗ ದೆವ್ವ ಹೊಗಿಸಿಕೊಂಡು ಕುಂತಿಯೋ ಅಂತೇನಿ.' ಈ ಸಾವಂತ್ರವ್ವನೂ ಕಡಿಮೆಯಿಲ್ಲ ಎಂದು ಅವಳಿಲ್ಲದಾಗ ಸಿದ್ದೂನಿಗೆ ಹೇಳುವಳು. 'ಈಕಿಗೆ ಬ್ಯಾರೆ ಕೆಲಸ ಇಲ್ಲ. ಅವರದು ತಂದು ಇವರಿಗೆ, ಇವರದು ಒಯ್ದು ಅವರಿಗೆ ಹೇಳುವದರಲ್ಲಿ ಇರ್ತಾಳ. ಮಾಯಿಗೆ ಆರಾಮ ಇಲ್ಲಂದ್ರ ಈಕೀನೆ ಹೋಗಿ ಆಕಿಗೆ ಆರೈಕೆ ಮಾಡ್ತಾಳಂತ.' ಅವ್ವನಿಗೆ ಎಲ್ಲರ ಮೇಲೆಯೂ ಸಂಶಯ! ಮಕ್ಕಳನ್ನು ನೋಡಿದರೆ ಮಾಯಕ್ಕನಿಗೆ ವಿಪರೀತ ಹುಚ್ಚು ಎನ್ನುವ ಮಾತು ಹಬ್ಬಿ ಅದು ಅವ್ವನಿಗೂ ಮುಟ್ಟಿತು. 'ಸಣ್ಣಮಗುವಾಗಿದ್ದರೆ ಸಿದ್ದೂನನ್ನು ಮುಚ್ಚಿಟ್ಟುಕೊಳ್ಳಬಹುದಾಗಿತ್ತು' ಯಲ್ಲವ್ವನ ವ್ಯಥೆ ಮುಗಿಯುವುದಿಲ್ಲ. ಅವನು ಇಷ್ಟು ಬೇಗ ಯಾಕೆ ದೊಡ್ಡವನಾದ, ಯಾಕೆ ಜೋಡುಗೂಡ ಹೊತ್ತು ನೀರು ತರುವಂತಾದ, ಯಾಕೆ ಹೊಲದ ಜವಾಬ್ದಾರಿ ಹೊರುವಂತಾದ ಎಂದು ದೀರ್ಘ ಉಸಿರೆಳೆದುಕೊಳ್ಳುವಳು.

'ಏಯ್ ಯಲ್ಲವ್ವ, ನೀ ನಮ್ಮ ಸಿದ್ದಣ್ಣ ಇನ್ನೂ ಸಣ್ಣಾಂವ ಅನಕೋತ ಕುಂದ್ರಬ್ಯಾಡ. ಅವನ ಮಕದ ಮ್ಯಾಲೂ ಮೀಸೆ ಒಡದಾವ. ನೋಡಿಲ್ಲ ನೀನು? ಈ ಹಕ್ಕಿ ಸೈತ ಜೋಡಿ ಹುಡಕ್ಕೊಂಡು ಹಾರಿಹೋಗೋದೆ.' ಸಾವಂತ್ರವ್ವನ ಮಾತಿನಿಂದ ಯಲ್ಲವ್ವನಿಗೆ ಬಹಳ ಕಳವಳವಾಯಿತು. ಸಾವಂತ್ರವ್ವ ಹಾಗೆ ಅವ್ವನಿಗೆ ಹೇಳಿದ್ದರಿಂದ ಅವ್ವ ಏನು ತಿಳಿದುಕೊಂಡಳೊ? ಒಂದನೆಯ ಮಗ ಕೈಕೊಟ್ಟು ಹೋದ. ಎರಡನೆಯ ಮಗ ದಾರಿ ಬಿಟ್ಟ. ಮೂರನೆಯ ಮಗನೂ ಹಾದಿ ಬಿಡುವುದರಲ್ಲಿದ್ದಾನೆಯೆ? ಸಾವಂತ್ರವ್ವ ಹೇಳಿದ್ದು ಸರಿಯಿದೆ. ಮೊನ್ನೆ ಉಮಕ್ಕ ಕೂಡ ಹೇಳಿದ್ದಳಲ್ಲ? 'ಏನವಾ ಯಲ್ಲವ್ವ? ನಿನ್ನ ಎಲ್ಲಾ ಗಂಡುಮಕ್ಕಳಿಗೆ ಹೆಂಗಸರ ಜೋಡಿ ಮಾತಾಡೋದು, ಅವರ ಜೋಡಿ ಕಿಕೀಕೀ ಅಂತ ನಗೋದು ಅಂದ್ರ ಬಾಳ ಹಿಡಿಸ್ತೈತಿ ಕಾಣತೈತಿ. ಸಿದ್ದಣ್ಣ ಇನ್ನೂ ಹುಡುಗ. ಆಗಲೆ ನಿಮ್ಮ ಹೊಲಕ್ಕ ಕಳೆ ತೆಗೆಲಿಕ್ಕೆ ಬರೋವಂಥ ಹುಡುಗಿಯರ ಜೋಡಿ ಮಾತಾಡಕೋತ ನಿಂತಿರ್ತಾನಲ್ಲ? ನೋಡಿಲ್ಲೇನು ನೀನು?' ಯಲ್ಲವ್ವನ ಮೇಲೆ ಇದೊಂದು ಹಠಾತ್ ಪ್ರಹಾರವಾಗಿತ್ತು. ತಾನು ನೋಡುತ್ತಿದ್ದೆ, ನಿಜ. ಆದರೆ ತನಗಿದು ಹೊಳೆದಿರಲೇ ಇಲ್ಲ. ಹೌದಲ್ಲ! ಯಾಕೆ ಹಲ್ಲು ಕಿರಿಯುತ್ತ, ನಗುತ್ತ ನಿಂತಿರುತ್ತಾನೆಂದು ಆಲೋಚಿಸಲೇ ಇಲ್ಲ! ಇರಲಿ, ಇದೇನು ದೊಡ್ಡ ಮಾತಲ್ಲ, ಸಿದ್ದಣ್ಣ ತಾನು ಎಳೆದ ಗೆರೆ ದಾಟುವವನಲ್ಲ. ಕಣ್ಣು ಕಿಸಿದರೆ ಸಾಕು. ಅಳಲು ಸುರು ಮಾಡುತ್ತಾನೆ. ತನ್ನ ಸಿಟ್ಟುಸೆಡವು ಅವನಿಗೆ ಗೊತ್ತಿಲ್ಲದ್ದೇನಲ್ಲ. ತಾನು ರೋಷಗೊಂಡಿದ್ದೇನೆಂದು ತಿಳಿದರೆ ಸಾಕು, ಅಂತಹ ಹುಡುಗಾಟಿಕೆಯನ್ನು ಬಿಟ್ಟುಬಿಡುತ್ತಾನೆ.

ಮೊದಮೊದಲು ಹುಡುಗಾಟಿಕೆಯಿದ್ದದ್ದು ನಂತರ ಹುಚ್ಚು ಸಾಹಸವಾಗಿ ಪರಿವರ್ತನೆ ಆಗುತ್ತದೆ. ಶಿವಣ್ಣನ ಗತಿಯೇನಾಗಿದೆ? 'ನಿನ್ನ ಸ್ಥಿತಿಯೂ ಹಂಗೇ ಆಗಬೇಕೇನು?' ಜೋರು ಮಾಡಿದರೆ ಆತ ಹೆಣ್ಣಿನ ಕಡೆ ಕಣ್ಣೆತ್ತಿ ನೋಡಲಾರ. ಸಿದ್ದಣ್ಣನಿಗೆ ಮೊದಲೆಲ್ಲ ಅಂತಹ ಭಾವನೆಗಳೇ ಬರುತ್ತಿರಲಿಲ್ಲ. ಶಿವಣ್ಣ ಮಾಯಕ್ಕನ ಬೆನ್ನು ಹತ್ತುವುದು ವಿಚಿತ್ರವಲ್ಲವೆ! ಸಿದ್ದಣ್ಣ ಹಲವು ಬಾರಿ ಆಲೋಚಿಸಿದ್ದ. ಮೊದಲು ತಾನು ಸನ್ಯಾಸಿಯಾಗಬೇಕು, ಬದುಕಿನಲ್ಲಿ ನೊಂದಿರುವ ತಾಯಿಯನ್ನು ಶ್ರದ್ಧೆಯಿಂದ ನೋಡಿಕೊಳ್ಳಬೇಕು, ಹುಟ್ಟಿದೂರಿನ ಸೇವೆ ಮಾಡಬೇಕು. ಇವೇ ಅವನ ಜೀವನದ ಗುರಿಗಳು. ಕಾಲೇಜು ಬಿಟ್ಟು ಒಕ್ಕಲುತನದ ಕೆಲಸಕ್ಕೆ ತೊಡಗಿಕೊಂಡಾಗ ಅವನ್ನು ಬಿಟ್ಟು ಬೇರೆ ವಿಷಯವಿರಲಿಲ್ಲ. ಅವುಗಳನ್ನು ಬದಿಗೆ ಸರಿಸಿ ಬೇರೆಯದನ್ನು ಯೋಚಿಸುವುದು ಅಸಾಧ್ಯವೇ ಸರಿ. ಭೂಮಿಯಲ್ಲಿ ಬೆವರು ಸುರಿಸಿ ದುಡಿಯುವುದೆಂದರೆ ಅವನಿಗೆ ಪ್ರಾಣ. ನೆರೆಯವರು ಅಸೂಯೆ ಪಡುವಂತಹ ದುಡಿಮೆ ಅವನದು. ಜಮೀನಿನಲ್ಲಿ ಒಳ್ಳೆಯ ಫಸಲು ತೆಗೆಯುತ್ತ ಅವ್ವನಿಂದಲೂ ಹೊಗಳಿಸಿಕೊಳ್ಳುತ್ತ ನಾಲ್ಕೈದು ವರ್ಷಗಳಾಗಿರಬೇಕು. ಈ ಕಾಲಾವಧಿಯಲ್ಲಿ ಆತನ ಮನಸ್ಸಿನಲ್ಲಿದ್ದ ನಾಲ್ಕೈದು ಗುರಿಗಳಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಆದರೆ ಇತ್ತೀಚೆಗೆ ಅವನಿಗೆ ಗುರಿಯಲ್ಲಿ ಸ್ವಲ್ಪ ಮಾರ್ಪಾಡು ಮಾಡಿಕೊಳ್ಳಬೇಕೆನಿಸಿದೆ. ಸನ್ಯಾಸಿಯಾಗಿರಬೇಕು ಎಂದುಕೊಂಡಿದ್ದೆ ಖರೆ. ಆದರೆ ಸಂಸಾರ ರಥವನ್ನು ಜಗ್ಗುತ್ತಲೇ ಯಾಕೆ ಉಳಿದ ಗುರಿಗಳನ್ನು ಮುಟ್ಟಬಾರದೆನ್ನುವ ತೀರ್ಮಾನಕ್ಕೆ ಸಿದ್ದಣ್ಣ ಬಂದಿದ್ದಾನೆ.

ಗೃಹಸ್ಥಾಶ್ರಮ ಎನ್ನುವುದನ್ನು ಹಿರಿಯರು ಯಾಕೆ ಮಾಡಿದ್ದಾರೆ ಮತ್ತೆ? ಈ ರೀತಿಯ ಆಲೋಚನೆ ಅವನಲ್ಲಿ ಒಂದೆರಡು ವರ್ಷಗಳಿಂದ ರೂಪುಗೊಳ್ಳುತ್ತಿತ್ತು. ಶಿವಣ್ಣ ಮತ್ತು ಮಾಯಕ್ಕರ ಬಗ್ಗೆ ಅವ್ವ ಮತ್ತು ಇತರ ಹೆಂಗಸರು ಮಾತನಾಡುವ ಮೊದಲೇ ಅವನಲ್ಲಿ ಹೆಣ್ಣಿನ ಬಗ್ಗೆ ಕುತೂಹಲ ದಿನೇ ದಿನೇ ಹೆಚ್ಚುತ್ತ ಹೋಗಿತ್ತು. ತಾನೇನು ಯಾರಿಗೂ ಅನ್ಯಾಯ ಮಾಡುತ್ತಿಲ್ಲವಲ್ಲ? ತನ್ನ ಕನಸುಗಳನ್ನು ಬಿಟ್ಟಿಲ್ಲವಲ್ಲ? ಮದುವೆಯೆನ್ನುವುದು ಸಾಧನೆಗೆ ಅಡ್ಡಿಯೆಂದುಕೊಂಡಿದ್ದೆ. ಮದುವೆ ಅಥವಾ ಹೆಣ್ಣಿನ ಸಹವಾಸವೆನ್ನುವುದು ತನ್ನ ಇಬ್ಬರು ಅಣ್ಣಂದಿರನ್ನು ಹುಟ್ಟಿದ ಮನೆಗೆ ವಿಮುಖ ಮಾಡಿತು. ದೇವರೆ, ಸಂಸಾರದ ಬಾಧೆಯಿಂದ ದೂರವಿರಬೇಕೆಂದುಕೊಂಡಿದ್ದೆ, ಆದರೆ ಮನಸ್ಸಿನ ತಲ್ಲಣ ನಿಯಂತ್ರಿಸಲಾಗದೆ ಸನ್ಯಾಸಿಯಾಗದ ನಿರ್ಧಾರಕ್ಕೆ ಬಂದಿದ್ದೇನೆಂದು ತನಗೆ ತಾನು ಜೋರಾಗಿ ಹೇಳಿಕೊಂಡ. ಆ ನಿರ್ಧಾರ ತಳೆದಾದ ಮೇಲೆ ಅವನು ತುಂಬ ಖುಷಿಯಾದ.

(ಸಶೇಷ)

